## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 76/2019 ಸಿಡಬ್ಲೂ: 13 ಪಿಡಬ್ಲೂ: 3

ಪ್ರಮಾಣವಚನ ಬೋಧಿಸಲಾಯಿತು ದಿಃ 22-05-2026

ಹೆಸರು : ಅಲ್ಲಾ ಭಕ್ಷ

ತಂದೆ ಹೆಸರು : ಶೇಕ್ ಲಾಡ್ಲೆ

ವಯಸ್ಸು : 54 ವರ್ಷ

ಉದ್ಯೋಗ : ಪಿ ಎಸ್ ಐ ಗುರುಮಿಟಕಲ್ ಪಿ ಎಸ್

ವಾಸಸ್ಥಳ : ಗುರುಮಿಟಕಲ್

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನಾನು 2015 ರಿಂದ 2019 ವರೆಗೆ ಸೇಡಂ ಪೋಲಿಸ್ ಠಾಣೆಯಲ್ಲಿ ಮುಖ್ಯ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ದಿಃ 27-08-2018 ರಂದು 12.30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಸರ್ಕಾರಿ ಆಸ್ಪತ್ರೆಯಿಂದ ಡೆತ್ ಎಂ ಎಲ್ ಸಿ ಬಂದ ಮೇರೆಗೆ ಆಸ್ಪತ್ರೆಗೆ ತೆರಳಿ ಮೃತನ ಹೆಂಡತಿಯಾದ ಚಾ ಸಾ 1 ರವರ ಲಿಖಿತ ಸ್ವರೂಪದಲ್ಲಿ ಹೇಳಿಕೆಯನ್ನು ಪಡೆದುಕೊಂಡು ರಾತ್ರಿ 02-00 ಗಂಟೆ ಸುಮಾರಿಗೆ ಪುನಃ ಪೋಲೀಸ್ ಠಾಣೆಗೆ ಬಂದು ಸದರಿ ದೂರಿನ ಆಧಾರದ ಮೇಲೆ ನಮ್ಮ ಠಾಣೆಯ ಗುನ್ನೆ ನಂಬರ 223/18 ನ್ನು ದಾಖಲಿಸಿಕೊಂಡು ಪ್ರ.ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟೆನು. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1 (ಬಿ ಮತ್ತು ಸಿ) ಎಂದು ಗುರುತಿಸಲಾಯಿತು. ಪ್ರ.ವ. ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ- 2(ಎ) ಎಂದು ಗುರುತಿಲಾಯಿತು. ನಂತರ ದಿ.27-08-2018 ರಂದು ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾಃ 14 ಇವರಿಗೆ ವಹಿಸಿಕೊಟ್ಟೆನು.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎ ಎಂ ವಕೀಲರಿಂದ ಃ

ನಿ ಪಿ 1 ರಲ್ಲಿ ವಾಹನ ಯಾರು ಚಾಲನೆ ಮಾಡುತ್ತಿದ್ದರು ಎಂಬುದರ ಕುರಿತು ಹೇಳಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಚಾ ಸಾ 1 ರವರು ಕಾರು ಯಾರು ಚಾಲನೆ ಮಾಡುತ್ತಿದ್ದರು ಅದು ಸಹ ಹೇಳಿಲ್ಲ ಎಂದು ನುಡಿಯುತ್ತಾರೆ. ಚಾ ಸಾ 1 ರವರು ವಾಹನದ ಮೇಲೆ ಪ್ರಯಾಣ ಮಾಡುತ್ತಿರಲಿಲ್ಲ. ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರು ಸಹ ಚಾ ಸಾ 1 ರವರಿಗೆ ಸಹಾಯ ಮಾಡುವ ಉದ್ದೇಶಕ್ಕಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಿಲ್ಲ.

ದಿಃ 27-08-2018 ರಂದು 12.30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಸರ್ಕಾರಿ ಆಸ್ಪತ್ರೆಯಿಂದ ಡೆತ್ ಎಂ ಎಲ್ ಸಿ ಬಂದ ಮೇರೆಗೆ ಆಸ್ಪತ್ರೆಗೆ ತೆರಳಿ ಮೃತನ ಹೆಂಡತಿಯಾದ ಚಾ ಸಾ 1 ರವರ ಲಿಖಿತ ಸ್ವರೂಪದಲ್ಲಿ ಹೇಳಿಕೆಯನ್ನು ಪಡೆದುಕೊಂಡು ರಾತ್ರಿ 02-00 ಗಂಟೆ ಸುಮಾರಿಗೆ ಪುನಃ ಪೋಲೀಸ್ ಠಾಣೆಗೆ ಬಂದು ಸದರಿ ದೂರಿನ ಆಧಾರದ ಮೇಲೆ ನಮ್ಮ ಠಾಣೆಯ ಗುನ್ನೆ ನಂಬರ 223/18 ನ್ನು ದಾಖಲಿಸಿಕೊಂಡು ಪ್ರ.ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟೆನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ದಿ.27-08-2018 ರಂದು ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾಃ 14 ಇವರಿಗೆ ವಹಿಸಿಕೊಟ್ಟೆನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**